ರಾಜ್ಯದಲ್ಲಿ ಹರಿಜನ, ಗಿರಿಜನರಿಗೆ ಪಂಪ್‌ಸೆಟ್ ನೀಡುವುದು

105(135): ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದಲ್ಲಿ ಕಳೆದ ಬಾರಿ ಹರಿಜನ ಗಿರಿಜನರಿಗೆ ಎಷ್ಟು ಕೊಳವೆಬಾವಿಗಳನ್ನು ಮಂಜೂರು ಮಾಡಲಾಗಿದೆ. ಹಾಗೂ ಎಷ್ಟು ಕೊಳವೆ ಬಾವಿಗಳನ್ನು ಕೊರೆಸಲಾಗಿದೆ.

ಆ. ತುರುವೇಕೆರೆ ತಾಲ್ಲೂಕಿಗೆ ಎಷ್ಟು ಮಂಜೂರು ಮಾಡಲಾಗಿದೆ?

ಇ. ಸುಮಾರು 500 ಫಲಾನುಭವಿಗಳು ಅರ್ಜಿ ಹಾಕಿದ್ದು, ಇನ್ನು ಎಷ್ಟು ವರ್ಷದಲ್ಲಿ ಇವರಿಗೆ ಅನುಕೂಲ ಮಾಡಿಕೊಡಲಾಗುವುದು.

ಈ. ಈ ವರ್ಷದಲ್ಲಿ ಕನಿಷ್ಟ ಪಕ್ಷ 100 ಕೊಳವೆಬಾವಿಗಳನ್ನಾದರೂ ಕೂಡಲಾಗುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ. ರಾಜ್ಯದಲ್ಲಿ 2001-02ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದ ಜನರಿಗೆ ಗಂಗಾ ಕಲ್ಯಾಣ ಯೋಜನೆಯಡಿ 430 ಕೊಳವೆಬಾವಿಗಳನ್ನು ಹಾಗೂ 5000 ಕೊಳವೆಬಾವಿಗಳನ್ನು ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಕೊರೆಯಲು ನಿಗಧಿಪಡಿಸಲಾಗಿತ್ತು.

ಈ ಪೈಕಿ ರಾಜ್ಯದಲ್ಲಿ 2001-02ನೇ ಸಾಲಿನಲ್ಲಿ ಮಾರ್ಚ್ ಅಂತ್ಯದವರೆಗೆ ಗಂಗಾ ಕಲ್ಯಾಣ ಯೋಜನೆಯಡಿ 343 ಕೊಳವೆಬಾವಿಗಳನ್ನು ವೈಯಕ್ತಿಕ ನೀರಾವರಿ ಯೋಜನೆಯಡಿ 2090 ಒಟ್ಟು2433 ಕೊಳವೆಬಾವಿಗಳನ್ನು ಕೊರಯಲಾಗಿದೆ. ಏಪ್ರಿಲ್ 2002 ರಿಂದ ಜೂನ್ 2002ರ ಅಂತ್ಯದವರೆಗೆ 1208 ಕೊಳವೆಬಾವಿಗಳನ್ನು ವೈಯಕ್ತಿಕ ನೀರಾವರಿ ಕೊಳವೆಬಾವಿ (ಯೋಜನೆ ಹಾಗೂ 101 ಕೊಳವೆ ಬಾವಿಗಳನ್ನು ಗಂಗಾ ಕಲ್ಯಾಣ ಯೋಜನೆಯಡಿ ಕೊರೆಯಲಾಗಿದೆ.

ಆ. ತುರುವೇಕೆರೆ ತಾಲ್ಲೂಕಿಗೆ ಪರಿಶಿಷ್ಟ ಜಾತಿಗೆ 15 ಹಾಗೂ ಪರಿಶಿಷ್ಟ ವರ್ಗದವರಿಗೆ 05, ಗಂಗಾ ಕಲ್ಯಾಣ ಯೋಜನೆಯಡಿ 3 ಕೊಳವೆಬಾವಿಗಳನ್ನು ಮಂಜೂರು ಮಾಡಲಾಗಿದೆ. ಅಲ್ಲದೆ ಮಂಜೂರು ಮಾಡಲಾಗಿದೆ.

ಇ. 2001-02ನೇ ಸಾಲಿನಲ್ಲಿ ತುರುವೇಕೆರೆ ವಿಧಾನಸಭಾ ಕ್ಷೇತ್ರದಿಂದ 153 ವೈಯಕ್ತಿಕ ನೀರಾವರಿ ಕೊಳವೆಬಾವಿಗಳಿಗೂ ಮತ್ತು 44 ಗಂಗಾ ಕಲ್ಯಾಣ ಘಟಕಗಳಿಗೂ ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಸರ್ಕಾರದಲ್ಲಿ ಲಭ್ಯವಿರುವ ಅನುದಾನಕ್ಕೆ ತಕ್ಕಂತೆ ಕೊಳವೆಬಾವಿಗಳನ್ನು ಕೊರೆಯುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.

ಈ. - ಇಲ್ಲ -